‘ಇನ್ನು ನಾನು ಹೊರಡ್ಲೇಬೇಕು ಕಣೇ. ನಿನ್ನಪ್ಪ ಒಬ್ರೇ ಒದ್ದಾಡ್ತಿದಾರೆ..’ ತುದಿಗಾಲಲ್ಲಿ ಎಂಬಂತೆ ಹೊರಟು ನಿಂತಳು ಸಂಧ್ಯಾ. ಮಗಳ ಮುಖ ಇಷ್ಟು ಸಣ್ಣ ಆಯಿತು.

‘ಪಾಪೂಗೆ ಈಗ್ಲೇ ಎದೆಹಾಲು ಬಿಡಿಸು ಅಂತೀಯಾ? ಕೊನೇ ಪಕ್ಷ ಒಂದು ವರ್ಷ...’ ಮಗಳ ಗಂಟಲು ಕಟ್ಟಿತು. ಸಂಧ್ಯಾ ನಿರ್ಧಾರ ಕೊಂಚ ಅಲುಗಾಡಿತು. ಮತ್ತೆ ಸ್ಥಿರವಾಗಿ ನಿಂತಿತು.

‘ಹಗಲಿಡೀ ನೀನು ಹೊರಗೇ ಇರೋದಲ್ವೇನೇ? ರಾತ್ರಿ ಹೊತ್ತು ಹಾಲು ಕುಡಿಸಿದ್ರೆ ಮುಗೀತು. ಮೇಲು ಹಾಲು, ರಾಗಿ ಮಣ್ಣಿ ಅಂತ ಅಭ್ಯಾಸ ಆಗಿದೆ ಅದಕ್ಕೆ’.

‘ಆದ್ರೂ’

‘ಸುಮ್ನಿರು ನೀನು. ನಿನ್ನ ಮಗನ ಕೂದಲು ಕೊಂಕದ ಹಾಗೆ ನಾನು ನೋಡ್ಕಂಡ್ರೆ ಸೈಯಲ್ವಾ? ವಾರಕ್ಕೋ, ಹದಿನೈದು ದಿನಕ್ಕೋ ಬಂದು ಹೋಗ್ತಿರು, ಅಷ್ಟೇ. ಕಾರಲ್ಲಿ ಎರಡು ಗಂಟೆ ದೂರ ಯಾವ ಮಹಾ?’

ವಿಧಿಯಿಲ್ಲದೆ ತಲೆಯಾಡಿಸಿದಳು ಮಗಳು, ಕಣ್ತುಂಬಾ ನೀರು ತುಂಬಿಕೊಂಡು, ಕೆನ್ನೆಗಿಳಿಯದಂತೆ ಸಂಭಾಳಿಸಿಕೊಂಡು.

***

ಅಲ್ಲಿಂದಾಚೆಗೆ ಕಳೆದಿದೆ ಮೂರು ವರ್ಷ. ಆ ಮೂರು ವರ್ಷಗಳಲ್ಲಿ ಸಂಧ್ಯಾ ಅನುಭವಿಸಿದ ಪಾಡು ಅವಳಿಗಷ್ಟೇ ಗೊತ್ತು. ಮೊಮ್ಮಕ್ಕಳನ್ನು ಆಡಿಸಿಕೊಂಡು ಸುಖವಾಗಿ ಕಾಲ ಕಳೆಯುವ ಬುಡ ಗಟ್ಟಿಯಿಲ್ಲದ ಹೇಳಿಕೆಗಳನ್ನು ಯಾರೋ ಹುಟ್ಟು ಹಾಕಿದ್ದು ಅವು ಹಾಗೇ ಚಲಾವಣೆಯಾಗುತ್ತಾ ಜನ ಅದನ್ನು ನಂಬಿಕೊಂಡು ಬಿಡುತ್ತಾರೆ, ಅದರಲ್ಲೂ ಸ್ವಂತ ಅನುಭವ ಇಲ್ಲದಿರುವವರು. ಜವಾಬ್ದಾರಿ ಇಲ್ಲದಿದ್ದರೆ ಆ ಕಥೆ ಬೇರೆ. ಆದರೆ ಬೆಳೆಯುತ್ತಿರುವ ಒಂದು ಮಗುವಿನ ಸಂಪೂರ್ಣ ಜವಾಬ್ದಾರಿ ಹೊತ್ತುಕೊಂಡು ನೋಡಿಕೊಳ್ಳುವುದೆಂದರೆ ಅದೊಂದು ಅಗ್ನಿಪರೀಕ್ಷೆ. ಎಲ್ಲಕ್ಕೂ ಒಂದು ವಯಸ್ಸು ಅನ್ನುವುದಿರುತ್ತದೆ. ಅಂಬೆಗಾಲಿಕ್ಕತ್ತಾ ಮನೆ ತುಂಬಾ ಓಡಾಡುತ್ತಿದ್ದ ಮಗುವನ್ನು ತೆಕ್ಕೆಗೆ ಹಾಕಿಕೊಂಡವಳಿಗೆ ಅದರ ಮೇಲೆ ಸದಾ ಕಾವಲುಗಣ್ಣಿಟ್ಟು ಕಾಯುವುದೇ ದೊಡ್ಡ ತಲೆಬೇನೆ. ಕಣ್ಣಿಗೆ ಕಂಡಿದ್ದನ್ನೆಲ್ಲಾ ಬಾಯಿಗೆ ಹಾಕಿಕೊಳ್ಳುವ ವಯಸ್ಸು. ಅವಘಡಗಳಿಗೆ ತುತ್ತಾದ ಇಂಥಾ ಪ್ರಸಂಗಗಳನ್ನು ಕೇಳಿದಾಗ, ಓದಿದಾಗ ಜೀವ ಬಾಯಿಗೆ ಬರುತ್ತದೆ. ತನ್ನ ಮೇಲೆ ನಂಬಿಕೆಯಿರಿಸಿ ಮಗಳು ತನ್ನ ಭವಿಷ್ಯತ್ತಿನ ನಿಧಿಯನ್ನು ತನ್ನಲ್ಲಿ ನ್ಯಾಸವಾಗಿರಿಸಿದ್ದಾಳೆ. ಬೇಕಿತ್ತಾ ಈ ಜಂಜಾಟ? ಬೇಡ ಅಂದರೆ ಮಗಳು ಅನುಭವಿಸಬೇಕಾದ ಕಷ್ಟ ನೆನೆದು, ಅದಕ್ಕಿಂಥ ಹೆಚ್ಚಾಗಿ ಮೊಮ್ಮಗ ಪಡಬೇಕಾದ ಪಾಡು ಯೋಚಿಸಿದರೆ ಕರಗಿ ನೀರಾಗುತ್ತದೆ ಹೃದಯ. ಇದೊಂದು ಅಗ್ನಿದಿವ್ಯ. ಬೇಡವೆಂದು ಬಿಡಲಾಗದ, ಬೇಕೆಂದು ಹಚ್ಚಿಕೊಳ್ಳಲು ಕಷ್ಟವಾಗುವ ದ್ವಂದ್ವ. ಜಗತ್ತಿನಲ್ಲಿ ಪರಮಸುಖ ಯಾವುದು ಅಂದರೆ ‘ಕಣ್ತುಂಬಾ ನಿರ್ಯೋಚನೆಯಿಂದ ನಿದ್ರೆ ಮಾಡುವುದು’ ಎನ್ನುವಷ್ಟು ಹಪಹಪಿ ಹುಟ್ಟಿಸುವ ದಿನಗಳನ್ನು, ಅಲ್ಲಲ್ಲ, ತಿಂಗಳುಗಳನ್ನು ಹಾದು ಬಂದಿದ್ದಾಳೆ ಸಂಧ್ಯಾ. ಹೊತ್ತಿನ ಪರಿವೆಯಿಲ್ಲದೆ ಎದ್ದೇಳುವ ಮಗುವಿಗೆ ಹೊತ್ತಲ್ಲದ ಹೊತ್ತಲ್ಲಿ ಹಾಲು ಕುಡಿಸಿ, ಜೂಗರಿಸುತ್ತಲೇ ಹೆಗಲ ಮೇಲೆ ಮಲಗಿಸಿಕೊಂಡು ತಟ್ಟುತ್ತಾ ನಿದ್ದೆ ಮಾಡಿಸಿದ ಸಂದರ್ಭಗಳು ಲೆಕ್ಕವಿಡಲಾಗದಷ್ಟು. ಮಗುವಿಗೆ ನೆಗಡಿಯೋ, ಭೇದಿಯೋ, ಮತ್ತೊಂದೇನೋ ಆಗಿ ಹುಷಾರು ತಪ್ಪಿದ್ದರಂತೂ ರಾತ್ರಿಯಿಡೀ ಜಾಗರಣೆ. ಅಜ್ಜಿಯನ್ನು ಬಿಟ್ಟು ತಾತನ ಜೊತೆ ಸುತರಾಂ ಹೋಗುವುದಿಲ್ಲ ಮಗು. ಅಜ್ಜಿ ಎನ್ನುವುದು ಈಗ ಹಳೆಗಾಲದ ಸಂಬೋಧನೆ. ‘ಅಮ್ಮಮ್ಮಾ...’ ಎಂದು ಕರೆಯುತ್ತದೆ ಮಗು. ಅದರ ತೊದಲು ನುಡಿಗೆ, ಮೊದಲ ನಡಿಗೆಗೆ ಸಾಕ್ಷಿಯಾಗಿ ಸಂಭ್ರಮಿಸಬೇಕಾಗಿದ್ದ ಮಗಳಿಗೆ ಅವನ್ನೆಲ್ಲಾ ಕಳೆದುಕೊಂಡಿರುವುದು ಜೀವನದ ಬಹು ದೊಡ್ಡ ಕೊರತೆ, ಎಂದೆಂದೂ ತುಂಬಿಬಾರದ ನಷ್ಟ ಎಂದು ಹಲವರಿಕೆ.

ಅಪ್ಪ ಕೆಲಸಕ್ಕೆ ರಾಜೀನಾಮೆ ಕೊಟ್ಟು ತಮ್ಮಲ್ಲಿಗೆ ಬಂದಿದ್ದರೆ ಈ ಗೋಜಲು ಇರುತ್ತಿರಲಿಲ್ಲ ಎನ್ನುವುದು ಅವಳ ಮನಸ್ಸಲ್ಲಿತ್ತು. ಆದರೆ ಅಪ್ಪ ಅದಕ್ಕೆ ತಯಾರಿರಲಿಲ್ಲ. ಇಂತಹ ವ್ಯವಸ್ಥೆ ಸಂಧ್ಯಾಗೂ ಸಮ್ಮತವೇನಲ್ಲ. ವರ್ಷಾನುಗಟ್ಟಲೆಯಿಂದ ಅಭ್ಯಾಸವಾಗಿದ್ದ ಊರು, ಪರಿಚಿತರು, ಸ್ನೇಹಿತರು, ಬಂಧುಗಳು. ತಮ್ಮ ಮನೆ ಅಂದರೆ ತಮ್ಮ ಮನೆ. ತಮ್ಮ ಊರು ಅಂದರೆ ತಮ್ಮ ಊರು. ಅಲ್ಲದೆ ಮೂರು ಮೂರು ವರ್ಷಕ್ಕೊಮ್ಮೆ ವರ್ಗಾವಣೆಯಾಗುವ ಉದ್ಯೋಗದಲ್ಲಿರುವ ಮಗಳು, ಅಳಿಯನ ಜೊತೆ ಹೊಸ ಜಾಗದಲ್ಲಿ ನೆಲೆಯೂರಲು ತಾವೂ ಬೆಂಬತ್ತಿ ಹೋಗುವುದೆಂದರೆ ಸರ್ವಥಾ ಸಾಧ್ಯವಿಲ್ಲದ ಮಾತು ಎನ್ನುತ್ತದೆ ಇಡೀ ಜೀವ, ಭಾವ. ಇಂತಿರುವಾಗ ಈಗಿನ ಈ ವ್ಯವಸ್ಥೆಗಿಂತ ಬೇರೆಯದೊಂದರ ಕುರಿತು ಸಂಧ್ಯಾ ಯೋಚಿಸಲು ಹೋಗುವುದಿಲ್ಲ. ಮಗಳು, ಅಳಿಯ ವಾರಕ್ಕೊಮ್ಮೆ ಬಂದು ಹೋಗುತ್ತಾರೆ. ಶನಿವಾರ ಬಂದು ಸೋಮವಾರ ಬೆಳಿಬೆಳಿಗ್ಗೆ ಅವರು ಹೊರಡುವವರೆಗೆ ಮಗನನ್ನು ಅರೆಗಳಿಗೆ ಬಿಟ್ಟಿರದೆ ಅವನ ಮೇಲೆ ಪ್ರೀತಿಯ ಮಳೆಗರೆಯುವ ಹೆತ್ತವರನ್ನು ಕಂಡು ಸಂಧ್ಯಾ ‘ಅಯ್ಯೋ...’ ಎಂದು ಕನಿಕರಿಸಿದ್ದಿದೆ. ಮಗಳು ಬಂದಾಗ ಯಾವ ಅಡ್ಡ ಮಾತು ಕೇಳಬೇಕಾಗುತ್ತದೆಯೋ ಎಂದು ಒಂದಿಷ್ಟು ಆತಂಕ ಕೂಡಾ. ಎದ್ದು, ಬಿದ್ದು ಮಗು ಗಾಯ ಮಾಡಿಕೊಂಡಿದ್ದರೆ ‘ಏನಾಯ್ತು?’, ‘ಹೇಗಾಯ್ತು?’ ಎನ್ನುತ್ತಾ ಆಕಾಶ ತಲೆಯ ಮೇಲೆ ಕಳಚಿ ಬಿದ್ದಷ್ಟು ಗಾಬರಿ. ಕೆಮ್ಮು, ನೆಗಡಿ ಎಂದು ಆರೋಗ್ಯ ಹದಗೆಟ್ಟಿದ್ದರಂತೂ ‘ಯಾಕಮ್ಮಾ? ಥಂಡೀಲಿ ಹೊರಗಡೆ ಕರ್ಕೊಂಡು ಹೋಗಿದ್ಯಾ? ತಣ್ಣೀರೇನಾದ್ರೂ ಕುಡಿದಿದಾನಾ?’ ಎನ್ನುವ ವಿಚಾರಣೆ. ಅಪರಾಧಿ ಸ್ಥಾನದಲ್ಲಿ ನಿಲ್ಲುವಂತಾಗಬೇಕಾದ್ದಿರಲಿಲ್ಲ. ಆದರೆ ಹಾಗೆನಿಸಿಬಿಡುತ್ತಿತ್ತು. ಮಗಳ ಮೇಲೆ ಕೊಂಚ ಮುನಿಸೂ. ಸಾಕುವವರಿಗೆ ಗೊತ್ತು ಅದರ ಕಷ್ಟ, ಸುಖ. ಒಂದು ತುತ್ತು ಅನ್ನ ತಿನ್ನಿಸಬೇಕಾದರೆ, ಗುಟುಕು ಹಾಲು ಕುಡಿಸಬೇಕಾದರೆ, ಹಿಂದೆ ಹಿಂದೆ ಓಡಾಡಿ ಬಿದ್ದು ಹೋಗುತ್ತದೆ ಕಾಲು. ‘ಹಸಿವಾದ್ರೆ ತನ್ನಷ್ಟಕ್ಕೆ ತಿಂತಾನೆ. ನೀನ್ಯಾಕೆ ಮೈ ಕೈ ನೋಯಿಸ್ಕೋತಿ?’ ಅನ್ನುತ್ತಾರೆ ಗಂಡ. ಅವರು ಹೇಳುತ್ತಾರೆಂದು ಹಾಗೇ ಬಿಡುವುದಕ್ಕಾಗುತ್ತದೆಯಾ? ಮಗು ಸೊರಗಿದರೆ ಮಗಳು ತರಾಟೆಗೆ ತೆಗೆದುಕೊಳ್ಳಲಿಕ್ಕಿಲ್ಲವಾ? ತೆಗೆದುಕೊಳ್ಳಲಿ, ಬಿಡಲಿ, ಮಗು ಉಪವಾಸ ಇದ್ದರೆ ಸಂಧ್ಯಾನಿಗೇ ಹೊಟ್ಟೆ ಚುರುಗುಡುತ್ತದೆ. ಈ ನಡುವೆ ಮಗಳ ಉಪದೇಶ ಬೇರೆ,

‘ನಿಂಗೆ ಶಿಸ್ತಿಲ್ಲ ಅಮ್ಮಾ. ಹೊತ್ತಿಗೆ ಸರಿಯಾಗಿ ತಿನ್ನಿಸ್ಬೇಕು. ಹಾಳುಮೂಳು ಕೊಟ್ಟು ಹೊತ್ತು ತಪ್ಪಿಸ್ಬಾರ್ದು’ ಇಷ್ಟು ಹೊತ್ತಿಗೆ ಹಣ್ಣು, ಇಷ್ಟು ಹೊತ್ತಿಗೆ ಹಾಲು, ಇಷ್ಟು ಹೊತ್ತಿಗೆ ಊಟ ದಿನವಿಡೀ ಇದರಲ್ಲೇ ಕಳೆದು ಹೋಗಿಬಿಡುತ್ತದೆ ಅನಿಸುತ್ತದೆ ಸಂಧ್ಯಾನಿಗೆ. ಈ ನಡುವೆ ತನ್ನ ಸ್ವಂತದ ಸ್ನಾನಗೀನ, ಮತ್ತೊಂದು. ಹಾಯಾಗಿ ಕಾಲು ಚಾಚಿ ಕೂತು ತಲೆಗೆ ಹರಳೆಣ್ಣೆ ತಟ್ಟಿಕೊಂಡು ಸಮೃದ್ಧವಾಗಿ ಸ್ನಾನ ಮಾಡುತ್ತಿದ್ದುದು ಕನಸು ಎಂಬಂತಾಗಿದೆ. ತಲೆ ಬಾಚಿಕೊಳ್ಳುವುದಕ್ಕೆ, ಡೈ ಮಾಡಿಕೊಳ್ಳುವುದಕ್ಕೆ ಪುರುಸೊತ್ತಿಲ್ಲದೆ, ‘ತಲೆಕೂದಲು ಅರ್ಧಕ್ಕರ್ಧ ಬಿಳಿಯಾಗಿದೆಯಲ್ಲ ಅವ್ವಾರೇ, ಬಣ್ಣ ಹಚ್ಕಂಬಾರ್ದಾ?’ ಎಂದು ಕೆಲಸದವಳೂ ವಿಚಾರಿಸಿಕೊಳ್ಳುವಂತಾಗಿದೆ. ಮಗಳು ಬಂದಾಗ ಅಗತ್ಯಗಳಿಗೆ ಪುರುಸೊತ್ತು ಮಾಡಿಕೊಳ್ಳೋಣವೆಂದರೆ ಹೊತ್ತಿಗೆ ಸರಿಯಾಗಿ ಸ್ಪೆಷಲ್ ತಿಂಡಿ, ಊಟಗಳ ತಯಾರಿಯನ್ನು ಮೈಮೇಲೆ ಎಳೆದುಕೊಂಡು, ಉಸ್ಸಪ್ಪಾ, ಈ ಹುಡುಗ ಯಾವಾಗ ಬೆಳೆದು ದೊಡ್ಡವನಾಗುತ್ತಾನೆಯೋ ಎನ್ನುವ ತಳಮಳವನ್ನು ಬಾಯಿ ಬಿಟ್ಟು ಹೇಳಿಕೊಳ್ಳಲಾಗದೆ, ನುಂಗಿಕೊಳ್ಳಲೂ ಆಗದೆ ಒದ್ದಾಡಿದ ಗಳಿಗೆಗಳಿವೆ. ಕಾಲು ಬಂದ ಹುಡುಗ ಒಂದು ಕಡೆ ಸುಮ್ಮನೆ ಕೂತಿರುತ್ತಾನೆಯೇ? ಅಲ್ಲಿ ಹತ್ತಿದ, ಇಲ್ಲಿ ಹಾರಿದ, ಅದನ್ನು ಎಳೆದ, ಇದನ್ನು ಮೈಮೇಲೆ ಬೀಳಿಸಿಕೊಂಡ, ಗಂಡ ಮನೆಗೆ ಬರುವಾಗ ಮೊಮ್ಮಗನಷ್ಟೇ ಉದ್ದವಿರುತ್ತದೆ ದೂರುಗಳ ಪಟ್ಟಿ. ಕೂರಿಸಿಕೊಂಡು ಕತೆ ಹೇಳುವುದಕ್ಕೆ ತಾತ ತಯಾರು. ಅದ್ಯಾವ ಮಾಯೆಯಲ್ಲಿ ಹುಡುಗ ಕಾರ್ಟೂನ್ ಚಾನಲ್‌ಗಳ ಗೀಳಿಗೆ ಬಿದ್ದನೋ? ಅವನಾಗಿ ಹೇಗೆ ಬೀಳುತ್ತಾನೆ? ಕಲಿಸಿದ್ದು. ಒಂದಿಷ್ಟು ಹೊತ್ತು ಜಿತವಾಗಿ ಕೂತು ಊಟ, ತಿಂಡಿ ತಿನ್ನುತ್ತಾನೆಂದು ರುಚಿ ಹಚ್ಚಿಸಿದ್ದು ಚಟ ಆಗಿ, ಟೀವಿ ಹಾಕಿ ತಿನ್ನಿಸಿದರೆ ಏನು ತಿಂದೆ, ಎಷ್ಟು ತಿಂದೆ ಗೊತ್ತಿಲ್ಲದ ಮಾಯೆ. ಹೌಹಾರಿದ್ದಳು ಮಗಳು. ‘ಏನೇನೋ ಕಲಿಸಿಬಿಟ್ಟಿದೀಯಲ್ಲ ಅಮ್ಮ? ಈ ವಯಸ್ಸಲ್ಲಿ ಹೀಗೆ ಟೀವಿ ನೋಡ್ತಿದ್ರೆ ಕಣ್ಣು ಯಾತಕ್ಕೆ ಬರುತ್ತೆ?’ ದೂರಿದ್ದಳು. ಅವಳ ಮಾತಿಗೆ ಕಾಸಿನ ಕಿಮ್ಮತ್ತು ಕೊಡದೆ ಅಮ್ಮ ಟೀವಿ ಬಂದ್ ಮಾಡಿದರೆ ಆಕಾಶ, ಪಾತಾಳ ಒಂದು ಮಾಡುತ್ತಿದ್ದ ಮಗರಾಯ. ಮಗನ ಗಂಟಲು ಇಷ್ಟು ದೊಡ್ಡದಿದೆ ಎಂದು ಗೊತ್ತಾದ ಅಮ್ಮನಿಗೆ ಪಿತ್ಥ ಕೆರಳಿ, ಬೆನ್ನ ಮೇಲೆ ಎರಡು ಗುದ್ದು ಬಿದ್ದು, ಹೊಡೆದಿದ್ದು ಯಾರಿಗೆ? ಅವಳ ಮಗನಿಗೋ ಅಥವಾ ಅವನ ದಾರಿ ತಪ್ಪಿಸಿದ್ದೇನೆಂಬ ಕಿನಿಸಿಗೆ ತನಗೋ ಎಂದು